**<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ</u>**
**<u>ದಂಡಾಧಿಕಾರಿಯವರ ನ್ಯಾಯಾಲಯ, ಜೇವರ್ಗಿ.</u>**

**<u>ಸಿಸಿ ನಂ.181/2024</u>**

**<u>ಫಿರ್ಯಾದಿಃ</u>**
ಸರಕಾರದ ಪರವಾಗಿಃ ಯಡ್ರಾಮಿ ಪೊಲೀಸರು.

**-ಃಃ ವಿರುದ್ದ ಃಃ-**

**<u>ಆರೋಪಿ/ತರುಃ</u>**

ರಾಜು ತಂದೆ ಸುಭಾಶ್ಚಂದ್ರಗೌಡ ಬಿರಾದಾರ
ವಃ 25ವರ್ಷ, ಉಃ ಕೂಲಿ ಕೆಲಸ,
ಸಾಃ ಕುರಳಗೇರಾ, ತಾಃ ಯಡ್ರಾಮಿ, ಜಿಃ ಕಲಬುರಗಿ.

## <u>ಆರೋಪಣೆ</u>

ನಾನು ಶ್ರೀ ಕಾಶಿನಾಥ ವಿ. ಉಪ್ಪಾರ್, ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಜೇವರ್ಗಿ, ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಆರೋಪಕ್ಕೆ ಗುರಿಪಡಿಸುತ್ತೇನೆ.

ದಿನಾಂಕ 12-03-2024 ರಂದು ಸಂಜೆ 04-10 ಗಂಟೆ ಸಮಯದಲ್ಲಿ ಯಡ್ರಾಮಿ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ ಅಲ್ಲಾಪೂರ ಗ್ರಾಮದ, ಬಸ್ಸ ನಿಲ್ದಾಣ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಆರೋಪಿಯಾದ ನೀನು ಕಾನೂನು ಬಾಹಿರವಾಗಿ ಅಕ್ರಮವಾಗಿ 1) 650 ಎಂ ಎಲ್ ಅಳತೆಯ 20 ಕಿಂಗಫಿಷರ ಬಿಯರ ಬಾಟಲಿಗಳು, 2) 650 ಎಂ ಎಲ್ ಅಳತೆಯ 06 ಟುಬೊರ್ಗ ಸ್ಟ್ರಾಂಗ ಬಿಯರ ಬಾಟಲಿಗಳು, 3) 180ಎಂ ಎಲ್ ಅಳತೆಯ 12 ಎಂಪಿರಿಯಲ ವಿಸ್ಕಿಯ ಬಾಟಲಿಗಳು, 4) 180ಎಂ ಎಲ್ ಅಳತೆಯ 05 ಮ್ಯಾಕಡೊಲ ವಿಸ್ಕಿಯ ಬಾಟಲಿಗಳು, 5) 180ಎಂ ಎಲ್ ಅಳತೆಯ 10 ಬ್ಯಾಗಪೈಪರ ವಿಸ್ಕಿಯ

ಬಾಟಲಿಗಳನ್ನು ಯಾವುದೇ ಪರವಾನಿಗೆ ಇಲ್ಲದೆ ಮಾರಾಟ ಮಾಡಿರುತ್ತಿ, ಈ ಮೂಲಕ ನೀವು ಅಬಕಾರಿ ಕಾಯ್ದೆ ಉಲ್ಲಂಘನೆ ಮಾಡಿರುವುದರಿಂದ ಆ ಮೂಲಕ ಅಬಕಾರಿ ಕಾಯ್ದೆ ಕಲಂ 32, 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಸದರಿ ಆರೋಪವು ನ್ಯಾಯಾಲಯದ ವ್ಯಾಪ್ತಿಯಲ್ಲಿದ್ದು, ಈ ನ್ಯಾಯಾಲಯದಿಂದ ಸದರಿ ಆರೋಪಕ್ಕೆ ನಿಮ್ಮನ್ನು ವಿಚಾರಣೆಗೆ ಒಳಪಡಿಸಲಾಗುವುದು.

ದಿನಾಂಕಃ 18-12-2025

**ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಜೇವರಗಿ.**

**ಆರೋಪಿತನ ಹೇಳಿಕೆ**

ಪ್ರಶ್ನೆ- 1 : ಈಗ ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದ ಆರೋಪಣೆಯನ್ನು ಅರ್ಥಮಾಡಿಕೊಂಡಿದ್ದಿರಾ?

ಉ :

ಪ್ರಶ್ನೆ-2 : ಆರೋಪಣೆಯನ್ನು ಒಪ್ಪುವಿರಾ ಅಥವಾ ವಿಚಾರಣೆ ನಡೆಸಬೇಕೆ?

ಉ :

(ಈ ಮೂಲಕ ದೃಢೀಕರಿಸುವುದೇನೆಂದರೆ ಮೇಲೆ ಕೊಟ್ಟಂತಹ ಹೇಳಿಕೆಗಳು ಆರೋಪಿತನ ನಿಜವಾದ ಹೇಳಿಕೆಗಳಿರುತ್ತವೆಂದು ಪ್ರಮಾಣಿಕರಿಸಲಾಗಿದೆ)

ದಿನಾಂಕಃ 18-12-2025

**ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಜೇವರಗಿ.**